ದೂರವಾಣಿ ಸಂಖ್ಯೆ:080-22879381/82/83

ಪಲ್ಲವಿ ಆಕುರಾತಿ, ಭಾ.ಆ.ಸೇ
ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ

C/o ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
2 ನೇ ಮಹಡಿ, ಡಾ. ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು-560001
E-mail.id: icps.kar@gmail.com

ಅ.ಸ.ಪ.ಸಂಖ್ಯೆ:ಕೆಎಸ್‌ಐಸಿಪಿಎಸ್/ಮ.ರ/2020-21

ದಿನಾಂಕ: 07-12-2020

ವಿಷಯ:- ವಲಸಿಗ ಕುಟುಂಬಗಳ ಮಕ್ಕಳಿಗೆ ಪುನರ್ವಸತಿ ಮತ್ತು ಶಿಕ್ಷಣ ಒದಗಿಸುವ ಕುರಿತು.

ಉಲ್ಲೇಖ:- ಕರ್ನಾಟಕ ಸರ್ಕಾರ, ಸರ್ವ ಶಿಕ್ಷಣ ಅಭಿಯಾನ ಇವರು ಹೊರಡಿಸಿರುವ ಸುತ್ತೋಲೆ ಸಂ.ಸಶಿಅ/ಒಒಎಸ್‌ಸಿ/ಸುತ್ತೋಲೆ/2017-18 ದಿನಾಂಕ:11.04.2017

****************

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬಳ್ಳಾರಿಯಿಂದ ಮೈಸೂರು ಜಿಲ್ಲೆಗೆ ಕಬ್ಬು ಕಡೆಯಲು ಬಂದಿದ್ದ ಕುಟುಂಬಕ್ಕೆ ಸೇರಿದ 3 ಮಕ್ಕಳು ನೀರಿನಲ್ಲಿ ಮುಳುಗಿ ಮರಣ ಹೊಂದಿರುವ ಮತ್ತು ಬಳ್ಳಾರಿ ಜಿಲ್ಲೆಯಿಂದಲೇ ಮಂಡ್ಯ ಜಿಲ್ಲೆಗೆ ಕಬ್ಬು ಕಡಿಯಲು ಬಂದಿದ್ದ ಕುಟುಂಬಕ್ಕೆ ಸೇರಿದ ಅಪ್ರಾಪ್ತ ಬಾಲಕಿಯ ಕೊಲೆಯಾಗಿರುವ ಬಗ್ಗೆ ವರದಿಯಾಗಿರುತ್ತದೆ. ಈ ಮಕ್ಕಳೆಲ್ಲಾ ವಲಸಿಗ ಕುಟುಂಬದವರಾಗಿರುತ್ತಾರೆ. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರನ್ನು ಸದರಿ ವಿಷಯ ಕುರಿತು ವಿಚಾರಿಸಲಾಗಿ ಉಲ್ಲೇಖಿತ ಸುತ್ತೋಲೆಯಲ್ಲಿ ವಲಸಿಗ ಕುಟುಂಬಗಳ ಮಕ್ಕಳಿಗೆ ಸರ್ವ ಶಿಕ್ಷಣ ಅಭಿಯಾನದಡಿ 6 ತಿಂಗಳ ಅವಧಿಗೆ ಋತುಮಾನ ವಸತಿಯುತ ಕೇಂದ್ರ ಕಾರ್ಯಕ್ರಮದಡಿ ಪುನರ್ವಸತಿ ಮತ್ತು ಶಿಕ್ಷಣವನ್ನು ಒದಗಿಸುತ್ತಿದ್ದು, ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವು ಚಾಲನೆಯಲ್ಲಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಕರ್ನಾಟಕದಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿಯೂ ಈ ರೀತಿಯ ಪ್ರಕರಣಗಳು ಮರುಕಳುಹಿಸದಂತೆ ಕ್ರಮಕೈಗೊಳ್ಳಲು ವಲಸಿಗ ಕುಟುಂಬದವರ ಮಕ್ಕಳಿಗೆ ಪ್ರಸ್ತುತ ಶಿಕ್ಷಣ ಇಲಾಖೆಯ ಋತುಮಾನ ವಸತಿಯುತ ಕೇಂದ್ರ ಕಾರ್ಯಕ್ರಮವನ್ನು ಕೋವಿಡ್-19 ಹಿನ್ನೆಲೆಯಲ್ಲಿ ನಿಲ್ಲಿಸಿರುವುದರಿಂದ ಸರ್ಕಾರಿ ಅಥವಾ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಪುನರ್ವಸತಿ ಸಲುವಾಗಿ ಮಕ್ಕಳ ಕಲ್ಯಾಣ ಸಮಿತಿ ಮುಖಾಂತರ ದಾಖಲಿಸಿಕೊಂಡು ಸೂಕ್ತ ಸೌಕರ್ಯ ಕಲ್ಪಿಸಬಹುದಾಗಿರುತ್ತದೆ.

ಈ ನಿಟ್ಟಿನಲ್ಲಿ ವಲಸಿಗ ಕುಟುಂಬದವರ 0-6 ವರ್ಷದ ಮಕ್ಕಳ ಬಗ್ಗೆ ಅಂಗನವಾಡಿಗಳಲ್ಲಿ ಮತ್ತು 6-18 ವರ್ಷದ ಮಕ್ಕಳ ಬಗ್ಗೆ ಈಗಾಗಲೇ ಕೆಲವು ವರ್ಷಗಳಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಋತುಮಾನ ವಸತಿಯುತ ಕಾರ್ಯಕ್ರಮದಡಿ ಪುನರ್ವಸತಿ ಮತ್ತು ಶಿಕ್ಷಣ ಕಲ್ಪಿಸಿರುವುದರಿಂದ ವಲಸಿಗ ಕುಟುಂಬದ ಮಕ್ಕಳ ಮಾಹಿತಿಯು ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಲಭ್ಯವಿರುತ್ತದೆ.

ಆದ್ದರಿಂದ ಸದರಿ ಮಾಹಿತಿಯು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಲಭ್ಯವಾದಲ್ಲಿ ಅಂತಹ ವಲಸಿಗ ಕುಟುಂಬದ ಮಕ್ಕಳನ್ನು ಮೂಲ ಜಿಲ್ಲೆಗಳಲ್ಲಿರುವ ಸರ್ಕಾರಿ & ಸರ್ಕಾರಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಅಂದರೆ ಬಾಲಮಂದಿರ, ವಿಶೇಷ ದತ್ತು ಪಾಲನಾ ಸಂಸ್ಥೆ ಮತ್ತು ಶಿಶುಮಂದಿರ ಇತ್ಯಾದಿ ಸಂಸ್ಥೆಗಳಲ್ಲಿ ಮಕ್ಕಳ ಕಲ್ಯಾಣ ಸಮಿತಿ ಮುಖಾಂತರ ದಾಖಲಿಸಿಕೊಂಡು ಈ ಮಕ್ಕಳಿಗೆ ಪುನರ್ವಸತಿ ಒದಗಿಸಲು ಅನುವಾಗುತ್ತದೆ.

ಆದ್ದರಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕೇಂದ್ರಗಳು ಮತ್ತು ಶಿಕ್ಷಣ ಇಲಾಖೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದವರ ಮಧ್ಯದಲ್ಲಿ ಸಮನ್ವಯ ಮತ್ತು ಸಹಕಾರ ಸಾಧಿಸಿ ವಲಸಿಗ ಕುಟುಂಬದವರ ಮಕ್ಕಳನ್ನು ಮೇಲೆ ಪ್ರಸ್ತಾಪಿಸಿದಂತಹ ಘೋರ ಘಟನೆಗಳಿಂದ ಪಾರು ಮಾಡಲು ವೈಯಕ್ತಿಕ ಗಮನದಿಂದ ಕ್ರಮ ಕೈಗೊಳ್ಳಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ

07.12.2020

ಶ್ರೀ/ಶ್ರೀಮತಿ ______
ಜಿಲ್ಲಾಧಿಕಾರಿಗಳು,
ಎಲ್ಲಾ ಜಿಲ್ಲೆಗಳು.

REDMI NOTE 8
AI QUAD CAMERA